ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 172/2025

ಸಿ ಡಬ್ಲ್ಯೂ- 8

ಪಿ ಡಬ್ಲ್ಯೂ- 4

ದಿಃ 23-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ವೀಕ್ಷೀತ ನಾಯ್ಕ

ತಂದೆಯ ಹೆಸರುಃ ವೆಂಕಟದಾಸ ನಾಯ್ಕ

ವಯಸ್ಸುಃ 21 ವರ್ಷ

ಉದ್ಯೋಗಃ ಖಾಸಗಿ ಕೆಲಸ

ವಿಳಾಸಃ ಮಾವಿನಕೇರಿ, ಅಂಕೋಲಾ.

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

2023-24 ರಲ್ಲಿ ನಾನು ವಿಧ್ಯಾರ್ಥಿಯಾಗಿದ್ದೆ. ನಾನು ಐಟಿಐ ವರೆಗೆ ಓದಿರುತ್ತೇನೆ. ನನಗೆ ಕನ್ನಡ ಹಾಗೂ ಆಂಗ್ಲಭಾಷೆ ಓದಲು ಬರುಯಲು ಬರುತ್ತದೆ. ನನಗೆ ಆರೋಪಿಯ ಪರಿಚಯವಿರುವುದಿಲ್ಲ. ಮೃತ ಗೇಣು ಶೇಷು ನಾಯಕ ಇವರ ಪರಿಚಯವಿರುವುದಿಲ್ಲ. ಚಾಸಾ-1 ರಿಂದ 7,9 ಮತ್ತು 10 ಇವರ ಪರಿಚಯವಿರುವುದಿಲ್ಲ. ಮಾವಿನಕೇರಿ, ಹಟ್ಟಿಕೇರಿ ಹಾಗೂ ಸಕಲಬೇಣ, ಜನತಾ ಕಾಲೋನಿ, ತಾರಿಬೋಳ ಇವೆಲ್ಲವೂ ಅವರ್ಸಾ ಪಂಚಾಯತಿಗೆ ವ್ಯಾಪ್ತಿಗೆ ಬರುತ್ತವೆ. ಅದೇ ರೀತಿ ನಮ್ಮದೂ ಸಹ ಅವರ್ಸಾ ಪಂಚಾಯತ್ ವ್ಯಾಪ್ತಿಗೆ ಬರುತ್ತದೆ. ಶ್ರೀಮತಿ ವಿನಯಾ ನಾಯ್ಕ ನನ್ನ ತಾಯಿ. ವಿನೀತ್ ಮತ್ತು ವಿಜೇತ್ ನನ್ನ ಸಹೋದರರು. ನನಗೆ

ಯಾವುದೇ ವಾಹನ ಅಪಘಾತವಾಗಿರುವುದಿಲ್ಲ. ನಾನು ಮತ್ತು ಸಂದೇಶ ಮೇತ್ರಿ ಇವರು ವಾಹನದ ಮೇಲೆ ಹೋಗುವಾಗ ಯಾವುದೇ ಅಪಘಾತವಾಗಿ ಯಾವುದೇ ನೋವು ಸಂಭವಿಸಿದ್ದು ಇರುವುದಿಲ್ಲ. ನಾನು ಹಿಂಬದಿ ಸವಾರನಾಗಿದ್ದು, ಆರೋಪಿ ಮತ್ತು ನಾನು ಬೈಕಿನಲ್ಲಿ ಹೋಗುವಾಗ ಮೃತ ಗೇಣು ಶೇಷು ನಾಯ್ಕು ಇವರಿಗೆ ಡಿಕ್ಕಿಪಡಿಸಿ ಅಪಘಾತಪಡಿಸಿರುವುದಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ಪೊಲೀಸರ ಮುಂದೆ ಅಪಘಾತವಾಗಿದ್ದು, ಪ್ರತ್ಯಕ್ಷವಾಗಿ ನಾನು ಅಪಘಾತವನ್ನು ನೋಡಿರುತ್ತೇನೆ ಎಂದು ಹಾಗೂ ಆರೋಪಿಯ ತಪ್ಪಿನಿಂದಲೇ ಅಪಘಾತವಾಗಿದೆ ಎಂದು ಯಾವುದೆ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಪೊಲೀಸರು ನನ್ನ ಯಾವುದೇ ಮರುಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

<u>ಪಾಟಿ ಸವಾಲುಃ</u> ಮಾನ್ಯ ಎ.ಪಿ.ಪಿ.ಯವರಿಂದ

2. ಆರೋಪಿಯು ನಿಮ್ಮ ಊರಿನವರು ಹಾಗೂ ಸ್ನೇಹಿತ ಎಂದರೆ ಸರಿಯಲ್ಲ. ಚಾಸಾ–1 ರಿಂದ 7,9 ಮತ್ತು 10 ರವರು ನಿಮ್ಮ ಊರಿನ ಅಕ್ಕಪಕ್ಕದ ಊರಿನವರು ಆಗಿದ್ದು ಅವರ ಪರಿಚಯವಿರುತ್ತದೆ ಎಂದರೆ ಸರಿಯಲ್ಲ. ಇವರೆಲ್ಲರ ಸಂಪೂರ್ಣ ಪರಿಚಯವಿದ್ದರೂ ಸಹ ಪರಿಚಯವಿಲ್ಲ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅದೇ ರೀತಿ ಮೃತ ಗೇಣು ಶೇಷು ನಾಯ್ಕು ಇವರೂ

ಸಹ ನಿಮ್ಮ ಪಕ್ಕದ ಊರಿನವರು ಆಗಿದ್ದು, ಅವರ ಪರಿಚಯವಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

2. ದಿಃ 26-06-2024 ರಂದು ಮಧ್ಯಾಹ್ನ ನೀವು ಅವರ್ಸಾಗೆ ಹೋದಾಗ, ನಿಮ್ಮ ಸ್ನೇಹಿತನಾದ ಆರೋಪಿಯು ನಿಮಗೆ ಸಿಕ್ಕಿದ್ದು, ಆತನು ನಿಮಗೆ ಹಾರವಾಡಕ್ಕೆ ಹೋಗಿ ಬರುವ ಅಂತ ಹೇಳಿ ಆತನ ಮೊಾಟರ್ ಸೈಕಲ್ ನಂ. ಕೆ ಎ 30 ಜೆ 2356 ನೆದ್ದರಲ್ಲಿ ನಿಮ್ಮನ್ನು ಹಿಂಬದಿ ಸವಾರನಾಗಿ ಕುಳ್ಳಿಸಿಕೊಂಡು ಹಾರವಾಡಕ್ಕೆ ಕರೆದುಕೊಂಡು ಹೋಗಿರುತ್ತಾನೆ ಎಂದರೆ ಸರಿಯಲ್ಲ. ನಂತರ ನೀವು ಹಾಗೂ ಆರೋಪಿಯು ಹಾರವಾಡ ಬೀಚ್ ನಲ್ಲಿ ಸ್ವಲ್ಪ ಹೊತ್ತು ಉಳಿದು ಮಧ್ಯಾಹ್ನ 2.40 ಗಂಟೆಯ ಸುಮಾರಿಗೆ ಹಾರವಾಡದಿಂದ ಹೊರಟಿದ್ದು, ಆರೋಪಿಯು ತನ್ನ ಮೋಟರ್ ಸೈಕಲನ್ನು ಸವಾರಿ ಮಾಡುತ್ತಿದ್ದು, ನೀವು ಹಿಂಬದಿ ಸೀಟಿನಲ್ಲಿ ಕುಳಿತುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿಯು ನಿಮಗೆ ಮಾವಿನಕೇರಿಯ ನಿಮ್ಮ ಮನೆಗೆ ಬಿಡಲು ಆತನ ಮೋಟರ್ ಸೈಕಲನ್ನು ಅವರ್ಸಾ ಕಡೆಯಿಂದ ಹಟ್ಟಿಕೇರಿ ಕಡೆಗೆ ರಾಷ್ಟ್ರೀಯ ಹೆದ್ದಾರಿ-66 ರಸ್ತೆಯಲ್ಲಿ ಅತಿವೇಗ ಹಾಗುಾ ನಿರ್ಲಕ್ಷತನದಿಂ ಚಲಾಯಿಸಿಕೊಂಡವನು ಹಟ್ಟಿಕೇರಿಯ ಬಾಬು ಗ್ಯಾರೇಜ್ ಎದುರು ಆರೋಪಿಯು ತನ್ನ ಮೊಟರ್ ಸೈಕಲ್ ಚಾಲನೆಯ ಮೇಲಿನ ನಿಯಂತ್ರಣವನ್ನು ಕಳೆದು, ರಸ್ತೆಯ ಬದಿಯಲ್ಲಿ ಅವರ್ಸಾಕಡೆಯಿಂದ ಹಟ್ಟಿಕೇರಿಯ ಡಿಪೋಕಡೆಗೆ ನಡೆದುಕೊಂಡು ಹೋಗುತ್ತಿದ್ದ ಒಬ್ಬ ಪಾದಾಚಾರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದು ಅಫಘಾತಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಅಪಘಾತದ

ಪರಿಣಾಮವಾಗಿ ಪಾದಾಚಾರಿ ಮತ್ತು ಆರೋಪಿ ಮತ್ತು ನೀವು ರಸ್ತೆಯ ಮೇಲೆ ಬಿದ್ದಿದ್ದು, ಸ್ಥಳದಲ್ಲಿ ಸೇರಿದ ಜನರು ನಿಮ್ಮನ್ನು ಎಬ್ಬಿಸಿ, ಉಪಚರಿಸಿರುತ್ತಾರೆ ಎಂರದೆ ಸರಿಯಲ್ಲ. ಸದರಿ ಅಪಘಾತದಿಂದ ನಿಮ್ಮ ಹಣೆಗೆ, ಬಲಗೈಗೆ ಹಾಗೂ ಎಡಕಾಲಿಗೆ ಸಣ್ಣಪುಟ್ಟ ಗಾಯನೋವು ಆಗಿದ್ದು, ಆರೋಪಿಗೆ ಮುಖ, ಬಲಕಣ್ಣು, ಬಲಕಾಲಿಗೆ ಹಾಗೂ ಮೈಕೈಗೆ ಗಾಯನೋವು ಆಗಿತ್ತು ಎಂದರೆ ಸರಿಯಲ್ಲ. ನಂತರ ರಸ್ತೆಯಲ್ಲಿ ಬಿದ್ದಿದ್ದ ಪಾದಾಚಾರಿಯನ್ನು ನೋಡಲು, ಆತನು ನಿಮ್ಮ ಊರಿನ ಗೇಣು ಶೇಷು ನಾಯ್ಕ ಇವರು ನಿಮಗೆ ಪರಿಚಯದವರು ಇದ್ದು, ಆತನ ಮೂಗಿಗೆ ಮತ್ತು ತಲೆಗೆ ಭಾರಿ ಗಾಯನೋವು ಆಗಿದ್ದು, ಅವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತ ಸಂಭವಿಸಿದಾಗ ಮಧ್ಯಾಹ್ನ 3 ಗಂಟೆಯಾಗಿದ್ದು, ಸ್ಥಳದಲ್ಲಿ ಸೇರಿದ ಜನರು ನಿಮಗೆ ಸ್ಥಳಕ್ಕೆ ಬಂದ ಐ ಆರ್ ಬಿ ಅಂಬುಲೆನ್ಸಿನಲ್ಲಿ ಹಾಕಿ ಅಂಕೋಲಾ ತಾಲೂಕಾ ಆಸ್ಪತ್ರೆಗೆ ಉಪಚಾರಕ್ಕೆ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ನಿಮಗೆ ಉಪಚರಿಸಿದ್ದು, ಆದಗೆ ಗೇಣು ಶೇಷು ನಾಯ್ಕ ಇವರಿಗೆ ತೀವ್ರವಾದ ಗಾಯ ಉಂಟಾಗಿದ್ದರಿಂದ ಅವರನ್ನು ಹೆಚ್ಚಿನ ಚಿಕಿತ್ಸೆಗೆ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ಹಾಗೂ ಆರೋಪಿಗೆ ಕೆ ಎಸ್ ಹೆಗಡೆ ಆಸ್ಪತ್ರೆಗೆ ಹೋಗಿ ಚಿಕಿತ್ಸೆಗೆ ದಾಖಲಿಸಿದ ವಿಷಯ ನಿಮಗೆ ತಿಳಿದು ಬಂದಿರುತ್ತದೆ ಎಂದರೆ ಸರಿಯುಲ್ಲ. ನಂತರ ಆರೋಪಿಯು ತನ್ನ ವಾಹನವನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದಿದ್ದರಿಂದ ಸದರಿ ಅಪಘಾತ ಸಂಭವಿಸಿರುತ್ತದೆ ಎಂದು ಚಾಸಾ-1 ರವರು ದಿಃ29-06-2024 ರಂದು ದೂರನ್ನು ದಾಖಲಿಸಿದ್ದು ತಿಳಿದು ಬಂದಿರುತ್ತದೆ ಎಂದೆರ ಸರಿಯಲ್ಲ. ಸದರಿ ವಿಚಾರವಾಗಿ ಪೊಲೀಸರು ನಿಮ್ಮನ್ನು ವಿಚಾರಣೆ ಮಾಡಿ, ನಿಮ್ಮ

ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯ ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-13 ಎಂದು ಗುರುತಿಸಲಾಯಿತು.

3. ಗಂಭೀರ ಗಾಯಾಳು ಗೇಣು ಶೇಷು ನಾಯ್ಕ ಇವರು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ವೆನ್ಲಾಗ್ ಆಸ್ಪತ್ರೆಯಿಂದ ಕಾರವಾರ ಜಿಲ್ಲಾ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಿಸಿದ್ದು, ದಿಃ23-07-2024 ರಂದು ರಾತ್ರಿ 12.10 ಗಂಟೆಗೆ ಮೃತ ಪಟ್ಟ ಬಗ್ಗೆ ತಿಳಿದು ಬಂದಿದ್ದು, ಸದರಿ ವಿಚಾರವಾಗಿ ನಿಮ್ಮ ಮರುಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಮರುಹೇಳಿಕೆಯ ಭಾಗವನ್ನು ನಿಪಿ-14 ಎಂದು ಗುರುತಿಸಲಾಯಿತು. ನಿಪಿ-13 ಮತ್ತು 14 ರಲ್ಲಿ ಬರೆದ ಎಲ್ಲ ವಿಚಾರಗಳ ಬಗ್ಗೆ ನಿಮ್ಮ ಸ್ಪಷ್ಟ ಹಾಗೂ ಸಂಪೂರ್ಣ ಮಾಹಿತಿ ಇದ್ದರೂ, ಸದರಿ ಅಪಘಾತ ಸಂಭವಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಅಪಘಾತದ ಸಂದರ್ಭದಲ್ಲಿ ಆರೋಪಿ ವಾಹನದ ಹಿಂಬದಿ ಸವಾರನಾಗಿ ಕುಳಿತಿದ್ದು, ಸದರಿ ಅಪಘಾತದಿಂದ ನಿಮಗೂ ಸಹ ಗಾಯನೋವು ಆಗಿರುತ್ತದೆ ಎಂದರೆ ಸರಿಯಲ್ಲ. ಮೃತ ಗೇಣು ಶೇಷು ನಾಯ್ಕ ಇವರ ಮರಣಕ್ಕೆ ಸದರಿ ಅಪಘಾತವೇ ಕಾರಣ ಎಂದು ತಿಳಿದು ನೀವು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿದ ಬಗ್ಗೆ ಹಾಗೂ ಆರೋಪಿಯ ತಪ್ಪನಿಂದಲೇ ಅಪಘಾತ ಸಂಭವಿಸಿದೆ ಎಂದು ನಿಪಿ-13 ಮತ್ತು 14 ರಂತೆ ನಿಮ್ಮ ಹೇಳಿಕೆ ನೀಡಿರುತ್ತೀರಿ ಎಂದರೆ ಸರಿಯಲ್ಲ. ಆರೊಪಿಯು ನಿಮ್ಮ ಪರಿಚಯಸ್ಥ ಹಾಗೂ ಸ್ನೇಹಿತನಾದ ಕಾರಣ ಆರೋಪಿಗೆ ಸಹಾಯವಾಗಲೆಂದು ಅಪಘಾತ ಸಂಭವಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ

ಸರಿಯಲ್ಲ.  ಸದರಿ ಅಪಘಾತಕ್ಕೆ ನೀವೂ ಸಹ ಕಾರಣಕರ್ತರು ಆಗಿದ್ದರಿಂದ ನಿಮ್ಮ ತಪ್ಪನ್ನು ಮರೆಮಾಚಲು ಸದರಿ ಅಪಘಾತ ಸಂಭವಿಸಿದರೂ ಸಹ ನಿಮಗೆ ಗೊತ್ತಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ  ಆರೋಪಿ ಪರ ವಕೀಲರಿಂದ ಇರುವುದಿಲ್ಲ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.